**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**

**ಸಿ.ಸಿ. 55/2010**

| ಹೆಸರು | ರಾಮಾಂಜಿನಿ | ಪಿ.ಡಬ್ಲ್ಯೂ.3 |
|---|---|---|
| | ಸಾ.ಪ್ರ.ವ.ಬೋ | ದಿ:–10.01.2019 |

**ಪಾಠಿ ಸವಾಲು: ಆರೋಪಿ ಪರ ವಕೀಲರಿಂದ:–**

ನಾನು ವ್ಯವಸಾಯ ಮಾಡುತ್ತೇನೆ. ಘಟನೆಯು ನಡೆದ ದಿನಾಂಕ ಹೇಳಲು ಈಗ ನೆನಪಿಲ್ಲ. ಸದರಿ ವಾಹನ ಆಟೋ ಆಗಿತ್ತು. ಅದರ ನಂಬರ್ ನನಗೆ ಗೊತ್ತಿಲ್ಲ. ಘಟನೆ ನಡೆದಾಗ ಮಧ್ಯಾಹ್ನ 12 ರಿಂದ 1 ಗಂಟೆ ಸಮಯವಾಗಿತ್ತು. ಸದರಿ ವಾಹನದಲ್ಲಿ 15 ಜನ ಇದ್ದರು. ಸದರಿ ವಾಹನ ಎಡಕನಹಳ್ಳಿ ಕಡೆಗೆ ಹೊರಟಿತ್ತು. ರಸ್ತೆಯ ಅಗಲವನ್ನು ಹೇಳಲು ಆಗುವುದಿಲ್ಲ. ನನಗೆ ಮೊಣಕಾಲಿಗೆ ಗಾಯವಾಗಿತ್ತು. ಬೇರೆಯವರಿಗೆ ಏನಾಗಿತ್ತು ಎಂದು ನನಗೆ ಗೊತ್ತಿಲ್ಲ. ಅದರಲ್ಲಿ ಒಬ್ಬರು ತೀರಿರುತ್ತಾರೆ. ನನ್ನನ್ನು ಅಶ್ವಿನಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಆರೋಪಿಯ ನಿರ್ಲಕ್ಷತನದಿಂದ ಯಾವುದೇ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ಗಾಯವಾಗಿರದೆ ಇದ್ದರೂ ಪರಿಹಾರಕ್ಕಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆ ದಿನ ಸದರಿ ವಾಹನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

**ಓ.ಹೇ.ಕೇ.ಸ.ಇದೆ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಹೊಸಕೋಟೆ.**